(ಈ) ಇಲ್ಲ. (ಉ) ಇಲ್ಲ. (ಊ) ಇಲ್ಲ.

581. ಶ್ರೀ ನರಸಿಂಹಸ್ವಾಮಿ. ಜೆ (ದೊಡ್ಡಬಳ್ಳಾಪುರ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜಿ.ಎಂ.ಎಫ್.ಮೂಲಕ ಈ ಹಿಂದೆ ಸಾಗುವಳಿ ಮಾಡಲು ಅವಕಾಶ ನೀಡಿದ್ದ ನೂರಾರು ರೈತ ಕುಟುಂಬಗಳು ಈಗಲೂ ಸಹ ಅಂತಹ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದು, ಯಾವುದೇ ಹಕ್ಕುದಾರಿಕೆಯನ್ನು ಹೊಂದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಅಂತಹ ಜಮೀನನ್ನು ರೈತರಿಗೆ ಮಂಜೂರು ಮಾಡಿ ಹಕ್ಕುದಾರಿಕೆ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ಹಾಗೂ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಹೌದು.

(ಆ) ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969 ಜಾರಿಗೆ ಬರುವ ಮುನ್ನ ಸರ್ಕಾರಿ ಜಮೀನನ್ನು ಸಾಗುವಳಿ ಮಾಡಲು ತಾತ್ಕಾಲಿಕವಾಗಿ ರೈತರಿಗೆ ಗುತ್ತಿಗೆ ನೀಡಲು ಅವಕಾಶವಿದ್ದು, ಗುತ್ತಿಗೆ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಅಂತಹ ರೈತನು ಪೂರೈಸಿದ್ದಲ್ಲಿ ಸದರಿ ಜಮೀನಿಗೆ ಕಿಮ್ಮತ್ತನ್ನು ವಿಧಿಸಿ ಅಂತಹ ಜಮೀನನ್ನು ಆ ರೈತರಿಗೆ ಮಂಜೂರು ಮಾಡಲು ನಿಯಮ 23ರಡಿಯಲ್ಲಿ ಅವಕಾಶವಿದ್ದು ತೊಂದರೆಗಳೇನು ಇರುವುದಿಲ್ಲ.

837. ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಯೋಜನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪ್ರಸಕ್ತ ವರ್ಷ ಸರ್ಕಾರ ಬಿ.ಎ.ಡಿ.ಪಿ ಯೋಜನೆಗೆ ನಿಗದಿಪಡಿಸಿರುವ ಹಣವೆಷ್ಟು?

(ಆ) ಡಾ: ಡಿ. ಎಂ. ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚಿನ ಅನುದಾನ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಶ್ರೀ ರಾಮಚಂದ್ರಗೌಡ (ಮಾನ್ಯ ಯೋಜನಾ ಸಚಿವರು)

(ಅ) ರೂ. 721.00 ಲಕ್ಷಗಳು.

(ಆ) ಗಡಿ ಪ್ರದೇಶಾಭಿವೃದ್ಧಿ ಕಾರ್ಯಕ್ರಮದಡಿ ಅತಿ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚಿನ ಅನುದಾನವನ್ನು ನೀಡುವ ಪ್ರಸ್ತಾವನೆ ಇರುವುದಿಲ್ಲ. ಈ ಅನುದಾನವನ್ನು ಗಡಿ ಪ್ರದೇಶಗಳಲ್ಲಿನ ಎಲ್ಲಾ 52 ತಾಲ್ಲೂಕುಗಳಲ್ಲಿ ಸಾಮಾನ್ಯವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗುವುದು (52 ತಾಲ್ಲೂಕುಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ). ಆದಾಗ್ಯೂ, ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಲು ಡಾ: ನಂಜುಂಡಪ್ಪ ನವರ 8 ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಿದೆ. ಇದರಡಿ ಪ್ರಸಕ್ತ ವರ್ಷದಲ್ಲಿ ರೂ. 1571.50 ಕೋಟಿ ರೂ.ಗಳನ್ನು ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ನಿಗದಿಪಡಿಸಿದ್ದು ರಾಜ್ಯದ ಎಲ್ಲಾ ಅತ್ಯಂತ, ಅತೀ ಹಾಗು ಹಿಂದುಳಿದ ತಾಲ್ಲೂಕುಗಳಲ್ಲಿ ಶೇಕಡ 50:30:20ರ ಅನುಪಾತದಲ್ಲಿ ವಿನಿಯೋಗಿಸಲು ಸೂಚಿಸಿದೆ.

ಅನುಬಂಧ

52 ಗಡಿ ತಾಲ್ಲೂಕುಗಳ ಪಟ್ಟಿ

ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು	ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು
01.	ರಾಯಚೂರು	27.	ಚಾಮರಾಜನಗರ
02.	ಮಾನ್ವಿ	28.	ಗುಂಡ್ಲುಪೇಟೆ
03.	ಪಾವಗಡ	29.	ವಿರಾಜಪೇಟೆ
04.	ಸಿರಾ	30.	ಮಡಿಕೇರಿ
05.	ಮಧುಗಿರಿ	31.	ಸುಳ್ಯ
06.	ಹೊಸಕೋಟೆ	32.	ಪುತ್ತೂರು
07.	ಕನಕಪುರ	33.	ಮಂಗಳೂರು
08.	ಇಂಡಿ	34.	ಬಂಟ್ವಾಳ
09.	ಬಿಜಾಪುರ	35.	ಸೂಪ
10.	ಸಂಡೂರು	36.	ಕಾರವಾರ

11.	ಸಿರಗುಪ್ಪ	37.	ಖಾನಾಪುರ
12.	ಬಳ್ಳಾರಿ	38.	ಬೆಳಗಾಂ
13.	ಚಳ್ಳಕೆರೆ	39.	ಹುಕ್ಕೇರಿ
14.	ಹಿರಿಯೂರು	40.	ಚಿಕ್ಕೋಡಿ
15.	ಮೊಳಕಾಲ್ಮೂರು	41.	ಅಥಣಿ
16.	ಗೌರಿಬಿದನೂರು	42.	ಹುಮ್ನಾಬಾದ್
17.	ಮಾಲೂರು	43.	ಬಸವಕಲ್ಯಾಣ
18.	ಗುಡಿಬಂಡೆ	44.	ಔರಾದ್
19.	ಬಾಗೇಪಲ್ಲಿ	45.	ಭಾಲ್ಕಿ
20.	ಚಿಂತಾಮಣಿ	46.	ಬೀದರ್
21.	ಶ್ರೀನಿವಾಸಪುರ	47.	ಅಳಂದ
22.	ಮುಳಬಾಗಿಲು	48.	ಸೇಡಂ
23.	ಬಂಗಾರಪೇಟೆ	49.	ಯಾದಗೀರ್
24.	ಆನೇಕಲ್	50.	ಚಿಂಚೋಳಿ
25.	ಹೆಚ್.ಡಿ. ಕೋಟೆ	51.	ಅಫಜಲ್‌ಪುರ
26.	ಕೊಳ್ಳೇಗಾಲ	52.	ಶಹಾಪುರ

865. ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಆಹಾರ ಪಾರ್ಕುಗಳು ರಾಜ್ಯದಲ್ಲಿ ಎಷ್ಟು ಇವೆ ಮತ್ತು ಅವು ಎಲ್ಲಿವೆ.

(ಆ) ಆಹಾರ ಪಾರ್ಕ್‌ಗಳ ಸ್ಥಾಪನೆಯ ಉದ್ದೇಶವೇನು;

(ಇ) ರಾಜ್ಯದಲ್ಲಿ 2007–08ನೇ ಸಾಲಿನಲ್ಲಿ ಎಷ್ಟು ಆಹಾರ ಪಾರ್ಕುಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

(ಈ) ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಆಹಾರ ಪಾರ್ಕ್ ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

(ಉ) ಒಂದು ಆಹಾರ ಪಾರ್ಕಿಗೆ ಸರ್ಕಾರದ ಎಷ್ಟು ಅನುದಾನವನ್ನು ಬಿಡುಗಡೆ ಮಾಡುತ್ತದೆ.